# ಮಾವಿನ ಹೊಲ ಎನ್ ಕೌಂಟರ್ ಮತ್ತು ನಾವು

ಕರ್ನಾಟಕದಲ್ಲಿದು ಬಹು ಪ್ರಚಾರದಲ್ಲಿರುವ ನಕ್ಸಲೀಯ ಚಳುವಳಿ ಮತ್ತೆ ಮೂರು ಅಮೂಲ್ಯ ಜೀವಗಳನ್ನು ಕಳೆದುಕೊಂಡಿದೆ ಒಬ್ಬ ಪೊಲೀಸ್ ಪೇದೆಯ ಜೀವವೂ ಹೋಗಿದೆ. ಮೂರು ಜೀವಗಳು ಜನರಿಗಾಗಿ ಅತೀವ ತುಡಿತ ಹೊಂದಿ ಅದಕ್ಕಾಗೇ ತಮ್ಮ ಜೀವನ ಮುಡಿಪಿಟ್ಟು ತಾವು ನಂಬಿದ ಸಿದ್ಧಾಂತಕ್ಕಾಗೇ ಮರಣ ಹೊಂದಿದರು. ಹಾಗೇ ನೋಡುವುದಾದರೆ ಈ ಜೀವಗಳನ್ನು ಈ ವ್ಯವಸ್ಥೆ ಸಹಿಸಿಕೊಳ್ಳಲಿಲ್ಲ ಎನ್ನಬಹುದು. ಯಾಕೆಂದರೆ ಬಂದೂಕು ಹಿಡಿದುಕೊಂಡಿರೊ ಎಲ್ಲರನ್ನೂ ಕೊಲ್ಲಬೇಕು. ಎನ್ನೋದಾದರೆ ಪಟ್ಟಭದ್ರ ಸ್ಥಾನಗಳಲ್ಲಿ ಕುಳಿತಿರುವ ಅದೆಷ್ಟೋ ಜನರನ್ನು ಕೊಲ್ಲಬೇಕಾಗುತ್ತದೆ. ಅದಕ್ಕೆ ನಮ್ಮ ಕಾನೂನು ಹಾಗೂ ಸಂವಿಧಾನದಡಿ ಅವಕಾಶ ಇಲ್ಲವೆಂದು ಹೇಳಲಾಗುತ್ತಿದ್ದರೂ ಕೆಲವರಿಗೆ ಅವುಗಳು ಅನ್ವಯವಾಗದಿರುವುದನ್ನು ನಾವು ಕಾಣುತ್ತಿದ್ದೇವೆ. ಆರೋಪಿಗಳನ್ನೆಲ್ಲಾ ಅಪರಾಧಿಗಳೆಂದು ಪರಿಗಣಿಸಲಾಗುವುದಿಲ್ಲ ಎಂದು ಹೇಳುವುದು ಕೂಡ ವ್ಯಕ್ತಿಗಳ ಸಾಂಪತ್ತಿಕ ಹಾಗೂ ಸಾಮಾಜಿಕ ಪ್ರಭಾವಗಳ ಹಿನ್ನಲೆಯಡಿ ಅನ್ವಯವಾಗುವುದು ಇಲ್ಲವೆ ಅನ್ವಯವಾಗದಿರುವುದು ನಡೆಯುತ್ತವೆ.

ಮಾವಿನಹೊಲ ಎನ್‌ಕೌಂಟರ್‌ನಲ್ಲಿ ಪೊಲೀಸರೂ ಸಾಯಿಸಿದ್ದು, ಜನಪರವಾಗಿ ಮಿಡಿಯುತ್ತಿದ್ದ ಮೂರು ಜೀವಗಳನ್ನು ಅವರೆಂದೂ ಯಾರಿಗೂ ಕೇಡನ್ನು ಬಯಸಿದ್ದಾಗಲೀ ಇಲ್ಲವೇ ಮಾಡಿದವರಾಗಲಿ ಅಲ್ಲ. ಯಾವುದೇ ಕ್ರಿಮಿನಲ್ ಹಿನ್ನೆಲೆಯವರೂ ಅಲ್ಲ. ಹಾಗಿದ್ದರೂ ಅವರನ್ನು ಹೊಂಚುಹಾಕಿ ಕಾದು ಕೊಲೆ ಮಾಡಲಾಯಿತು. ನಾಗರಿಕ ಸಮಾಜವೆಂದು ಹೇಳುವ ಈ ಸಮಾಜದ ಕೆಲವರು ಅದನ್ನು ವ್ಯಾಖ್ಯಾನಿಸುತ್ತಿರುವ ಪರಿ ನೋಡಿದಾಗ ಸಖೇದಾಶ್ಚರ್ಯವಾಗುತ್ತಿದೆ. ಪ್ರಜಾತಾಂತ್ರಿಕವಾಗಿ ಸಂವಿಧಾನ ಬದ್ಧವಾಗಿ ಹೋರಾಟಕ್ಕಿಳಿದಿದ್ದರೆ ಈ ಜೀವಗಳಿಗೆ ಈಸ್ಥಿತಿ ಬರುತ್ತಿರಲಿಲ್ಲ, ಶಸ್ತ್ರ ಕೈಯಲ್ಲಿ ಹಿಡಿದಿದ್ದರಿಂದಲೇ ಈ ಗತಿಯಾಯಿತು ಎಂದು ಹೇಳುತ್ತಾ ಜನಪರ ಹೃದಯಗಳಿದ್ದ ಈ ಜೀವಗಳ ಕೊಲೆಗಾರರ ಬಗ್ಗೆ ಹಾರಿಕೆಯ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಪ್ರಜಾತಾಂತ್ರಿಕತೆ ಇಲ್ಲದೆ, ಸಂವಿಧಾನಕ್ಕೂ ಬದ್ಧರಲ್ಲದ ಎಷ್ಟೋ ವ್ಯಕ್ತಿಗಳು ಹಾಗೂ ಶಕ್ತಿಗಳು ಈ ನಾಗರಿಕ ಸಮಾಜದ ಆಯಕಟ್ಟಿನ ಜಾಗಗಳಲ್ಲಿ ಕುಳಿತಿರುವುದನ್ನು ಅಲ್ಲಗಳೆಯಲು ಸಾಧ್ಯವೇ? ಇಂತಹವರ ಬಗ್ಗೆ ಈ ದೇಶದ ಕಾನೂನು ವ್ಯವಸ್ಥೆ ಏನೂ ಮಾಡಲಾರದ ಸ್ಥಿತಿ ಇದೆ. ಈ ನೆಲದ ಜನರು ಎಷ್ಟೇ ವಿರೋಧಿಸುತ್ತಿದ್ದರೂ ಹಲವಾರು ಜೀವವಿರೋಧಿ ಹಾಗೂ ಪರಿಸರ ಕಂಟಕ ಯೋಜನೆಗಳನ್ನು ಬಲಾತ್ಕಾರವಾಗಿ ಹೇರಲಾಗುತ್ತಿದೆ. ಆ ಬಗ್ಗೆ ಜಾಗೃತಿ ಮೂಡಿಸಲು ತೆರಳುವವರಿಗೂ ಹಲವು ಎಡರುತೊಡರುಗಳನ್ನು ಒಡ್ಡುವುದು, ಅದರಿಂದ ಹಿಂದ್ಸರಿಯದಿದ್ದಲ್ಲಿ ಇದ್ದೇ ಇದೆ. ಸುಳ್ಳು ಕೇಸುಗಳಡಿ ಜೈಲುಪಾಲು ಮಾಡುವುದು, ಇದನ್ನೂ ಮೀರಿ ಮುದುವರಿದರೆ ಹೋರಾಟಗಾರ ಎ.ಟಿ. ಬಾಬು, ಜನಪರ ಕಲಾವಿದ ಸಫ್ದರ್ ಹಾಶ್ಮಿ, ಜನಪರ ಪತ್ರಕರ್ತ

2...

ಅಬ್ದುಲ್ ರಷೀದ್‌ರಂತಹವರಿಗೆ ಒದಗಿದ ಗತಿಯಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಒಂದು ನಾಗರಿಕ ಸಮಾಜದಲ್ಲಿ ಜನರ ಪ್ರಜಾತಾಂತ್ರಿಕ ಅಭಿಪ್ರಾಯಗಳಿಗೆ ಪ್ರತಿಭಟನೆಗಳಿಗೆ ಅವಕಾಶದ ಅಭಾವ ಇಲ್ಲವೇ ತಡೆ ಉಂಟಾದಾಗ ಮಾತ್ರ ಮನೋಹರ್ ರಂತಹ ಜನಪರ ಪತ್ರಕರ್ತ ಹಾಗೂ ಹೋರಾಟಗಾರ ಶಸ್ತ್ರ ಹಿಡಿಯುವ ಆಲೋಚನೆ ಮಾಡಲು ಸಾಧ್ಯ. ಇಲ್ಲದೇ ಇದ್ದಲ್ಲಿ ಸಮಾಜದ ಬಗ್ಗೆ ಅಷ್ಟು ಗಾಢವಾಗಿ ತುಡಿಯುವ ಈ ಜೀವಗಳಿಗೆ ಶಸ್ತ್ರ ಹಿಡಿಯಬೇಕಾದ ಅನಿವಾರ್ಯತೆ ಬರುವುದೇ ಇಲ್ಲವೆನಿಸುತ್ತದೆ.

ಸರ್ಕಾರಗಳು ನಡೆಸುವ ಎನ್‌ಕೌಂಟರ್ ಹೆಸರಿನ ಕಗ್ಗೊಲೆಗಳಿಗೆ ಸಮರ್ಥನೆ ಆಗುವ ರೀತಿಯಲ್ಲಿ ಪ್ರತಿಕ್ರಿಯೆಗಳನ್ನು ನಾಗರಿಕ ಸಮಾಜದ ಪ್ರತಿನಿಧಿಗಳು ನೀಡಬಾರದು.

ಸಮಾಜದ ತುಳಿತಕ್ಕೊಳಗಾದವರಿಗಾಗಿ ಒಟ್ಟಾರೆ ಸಾಮಾಜಿಕ ನ್ಯಾಯಕ್ಕಾಗಿ ಜೀವ ಅರ್ಪಿಸಿದ ಈ ಮೂವರಿಗೆ ಕಣ್ಣೀರು ಮಿಡಿಯುವುದು ಮಾತ್ರ ನಾಗರಿಕ ಸಮಾಜದ ಕರ್ತವ್ಯ ಆಗಬಾರದು. ಬದಲಿಗೆ ಅವರೆತ್ತಿರುವ ಪ್ರಶ್ನೆಗಳ ಬಗ್ಗೆ, ಆ ಜೀವಗಳ ಪ್ರಾಣಾರ್ಪಣೆಗೆ ಕಾರಣವಾಗಿರುವ ಈ ವ್ಯವಸ್ಥೆಯಲ್ಲಿನ ಲೋಪಗಳ ಕುರಿತು ಚಿಂತನೆ ಮಾಡಿ ಮತ್ತು ಪರಿಹಾರಗಳಿಗೆ ನಾಗರಿಕ ಸಮಾಜ ಮುಂದಾಗಬೇಕಿರುವುದು ಆದ್ಯ ಕರ್ತವ್ಯ ಎನಿಸುತ್ತದೆ.

5-12-2008 **-ಭರತ್ ರಾಜ್**